ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾ ಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ

ದಿನಾಂಕಃ 4 ನೇ ಜುಲೈ 2017 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 400/2017

ಫಿರ್ಯಾದುದಾರರು. .. ರಾಜ್ಯ ಸರ್ಕಾರದ ಪರವಾಗಿ,
ಪೊಲೀಸ್ ವೃತ್ತ ನಿರೀಕ್ಷಕರು,
ಕಾರ್ಕಳ ವೃತ್ತ,
ಕಾರ್ಕಳ, ಉಡುಪಿ ಜಿಲ್ಲೆ.

- ವಿರುದ್ಧ -

ಆರೋಪಿ ಉಮಾನಾಥ ಪ್ರಭು,
ಪ್ರಾಯ ಃ 47 ವರ್ಷ
ತಂದೆ ಃ ವಾಸುದೇವ ಪ್ರಭು,
ವಾಸಃ ಮಿಯಾರು ಚರ್ಚ್ ಎದುರು ರಸ್ತೆ,
ಬಾಡಿಗೆ ಮನೆ, ಮಿಯಾರು ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

ದೋಷಾರೋಪಣೆ

ಶ್ರೀ ಪುಟ್ಟರಾಜು, ಬಿ.ಎ., ಎಲ್‌ಎಲ್.ಬಿ., ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಮೊದಲನೇಯದಾಗಿ ಆರೋಪಿಯಾದ ನೀವು ಸ್ವಂತ ಲಾಭಕ್ಕಾಗಿ ಕಳವು ಕೃತ್ಯದಿಂದ ಹಣಗಳಿಸುವ ಉದ್ದೇಶದಿಂದ ದಿನಾಂಕ 21.07.2016 ರಿಂದ 23.07.2016 ರ ಮಧ್ಯೆ ಒಂದು ದಿನ ರಾತ್ರಿ ಸಮಯದಲ್ಲಿ ಕಾರ್ಕಳ ತಾಲೂಕು ದುರ್ಗಾ ಗ್ರಾಮದ ಮಲೆಹಿತ್ಲು ಎಂಬಲ್ಲಿ ಇರುವ ಸಾಕ್ಷಿ 1ನೇಯವರ ವಾಸದ ಮನೆಯ ಮುಂಬಾಗಿಲಿಗೆ ಹಾಕಿದ ಬೀಗವನ್ನು ಕಬ್ಬಿಣದ ರಾಡ್‌ನಿಂದ ಮುರಿದು, ಮನೆಯೊಳಗೆ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 457 ರ ಜೊತೆ 75 ರ ಕೆಳಗೆ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಮೇಲೆ ತಿಳಿಸಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದಂತೆ ಕೃತ್ಯವೆಸಗಿದ್ದಲ್ಲದೇ ಮನೆಯೊಳಗೆ ಪ್ರವೇಶಿಸಿ ಕಪಾಟಿನ ಬಾಗಿಲನ್ನು ಕತ್ತಿಯಿಂದ ತೆರೆದು ಅದರೊಳಗಿದ್ದ ಚಿನ್ನದ ಲಕ್ಷ್ಮಿ ಪೆಂಡೆಂಟ್ ಇರುವ ಹವಳದ ಚೈನ್ –1, R ಮಾರ್ಕ್ ಇರುವ ಚಿನ್ನದ ಉಂಗುರ-1, ಚಿನ್ನದ ಉಂಗುರ-1, ಬಾಬಾ ಚಿತ್ರದ ಪೆಂಡೆಂಟ್ ಇರುವ ಚಿನ್ನದ ಹಳೆ ಚೈನು-1, ಹಾಗೂ ರೂ 60,000/- ನಗದನ್ನು ಕಳುವು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ ಆರೋಪಿಯಾದ ನೀವು ಸಿಸಿ ನಂಃ 780/07 ಪ್ರಕರಣದಲ್ಲಿ ದಿಃ 18-01-2008 ರಂದು ಶಿಕ್ಷಾಧೀನ ಹಳೆಯ ಆರೋಪಿಯಾಗಿ, ಈ ಪ್ರಕರಣದಲ್ಲಿಯೂ ಭಾಗಿಯಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 75 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು.)

(ಪುಟ್ಟರಾಜು)
ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ.(C/C)

***ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ***

**ದಿನಾಂಕಃ 4 ನೇ ಜುಲೈ 2017 ನೇ ಇಸವಿ.**

**ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 400/2017**

**ಫಿರ್ಯಾದುದಾರರು.** .. **ರಾಜ್ಯ ಸರ್ಕಾರದ ಪರವಾಗಿ,**
**ಪೊಲೀಸ್ ವೃತ್ತ ನಿರೀಕ್ಷಕರು,**
**ಕಾರ್ಕಳ ವೃತ್ತ,**
**ಕಾರ್ಕಳ, ಉಡುಪಿ ಜಿಲ್ಲೆ.**

**- ವಿರುದ್ಧ -**

**ಆರೋಪಿ** **ಉಮಾನಾಥ ಪ್ರಭು,**
**ಪ್ರಾಯ ಃ 47 ವರ್ಷ**
**ತಂದೆ ಃ ವಾಸುದೇವ ಪ್ರಭು,**
**ವಾಸಃ ಮಿಯಾರು ಚರ್ಚ್ ಎದುರು ರಸ್ತೆ,**
**ಬಾಡಿಗೆ ಮನೆ, ಮಿಯಾರು ಗ್ರಾಮ,**
**ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.**

**ದೋಷಾರೋಪಣೆ(ಚಾರ್ಜ್)**

**<u>ಪ್ರಶ್ನೆ 1</u>ಃ ಈ ದಿನ ನಿನಗೆ/ನಿಮಗೆ ಓದಿ ಹೇಳಿ ವಿವರಿಸಿದ ನಿನ್ನ/ನಿಮ್ಮ ಮೇಲೆ ಆರೋಪಿಸಿರುವ ಆಪಾದನೆ/ದೋಷಾರೋಣೆಯನ್ನು/ಗಳನ್ನು ಅರ್ಥ ಮಾಡಿಕೊಂಡಿರುವಿರಾ ?**

**ಉತ್ತರಃ-**

**<u>ಪ್ರಶ್ನೆ 2</u> ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವೀರಾ? ಅಥವಾ**

**ಪ್ರಕರಣದಲ್ಲಿ ವಿಚಾರಣೆ ಆಗಬೇಕೆಂದು ಕೇಳುವಿರಾ?**

ಉತ್ತರಃ-

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 04 ನೇ ಜುಲೈ ತಿಂಗಳು 2017 ರಂದು ಮೇಲ್ಕಂಡಂತೆ ನಮೂ ದಿಸಿಕೊಳ್ಳಲಾಯಿತು.

ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ

ಕಾರ್ಕಳ C/c

ಆರೋಪಿಯಾದ ನೀವು ದಿನಾಂಕ 25-03-2016 ರ 20.00 ಗಂಟೆಯಿಂದ ದಿಃ 26-03-2016 ರಂದು ಬೆಳಿಗ್ಗೆ 6.00 ಗಂಟೆಯ ಮಧ್ಯೆ ಕಾರ್ಕಳ ತಾಲೂಕು ಕಸಬಾ ಗ್ರಾವದ ಗಾಂಧಿ ಮೈದಾನದ ಬಳಿ ಇರುವ ಶ್ರೀ ಆದಿಶಕ್ತಿ ವೀರಭದ್ರ ದೇವಸ್ಥಾನದ ಗರ್ಭಗುಡಿಯ ಮತ್ತು ಸ್ಟ್ರಾಂಗ್ ರೂಮ್‌ನ ಬಾಗಿಲಿನ ಬೀಗಗಳನ್ನು ಬಲಾತ್ಕಾರವಾಗಿ ಮುರಿದು ಒಳಪ್ರವೇಶಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

2. ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದಂತೆ ಕೃತ್ಯ ಎಸಗಿದ್ದಲ್ಲದೇ ಗರ್ಭಗುಡಿಯ ಮುಂಭಾಗದ ತೀರ್ಥ ಮಂಟಪದ ಬಳಿ ಜಗುಲಿಯಲ್ಲಿದ್ದ ಎರಡು ಕಾಣಿಕೆ ಡಬ್ಬಿಯ ಮತ್ತು ತೀರ್ಥ ಮಂಟಪದ ಮಧ್ಯ ಭಾಗದಲ್ಲಿ ಇರಿಸಿದ್ದ ಕಾಣಿಕೆ ಡಬ್ಬಿಯ ಬೀಗಗಳನ್ನು ಮುರಿದು ಕಾಣಿಕೆ ಡಬ್ಬಿಯಲ್ಲಿದ್ದ ಸುಮಾರು ರೂ. 2,500/- ನಗದನ್ನು ಕಳುವು ಮಾಡಿದ್ದು, ಆ

ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

3. ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ 6ನೇ ಆರೋಪಿಯಾದ ನೀವು ಮೇಲೆ ಹೇಳಿದಂತೆ ಕೃತ್ಯ ಎಸಗಿದ್ದಲ್ಲದೇ, ಸದರಿ ದನವನ್ನು ವಧಿಸಿ ಮಾಂಸ ಮಾಡಿ ಮಾರಾಟ ಮಾಡಿದ್ದು, ಆ ಮೂಲಕ ಕರ್ನಾಟಕ ಗೋ ವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ 1964 ಕಾಯ್ದೆಯ ಕಲಂ 9, 11 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು.)

(ಪುಟ್ಟರಾಜು)
ಪ್ರ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ.